ದಿನಾಂಕ : 02-07-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಿಪಿ-48 ರ ವಿವರಗಳ ಪ್ರಕಾರ ಅದರಲ್ಲಿ ನಮೂದಿಸಿರುವ ಸ್ವತ್ತನ್ನು ಪ್ರತಿವಾದಿಗಳ ಹಿರಿಯರಾದ ಕೃಷ್ಣಮೂರ್ತಿ ರವರು ಖರೀದಿಸಿದ್ದಾರೆ ಎಂದರೆ ಸರಿ . ನಿಪಿ -48 ರ ವಿವರಗಳ ಪ್ರಕಾರ ಸ್ವತ್ತಿನ ಉತ್ತರಕ್ಕೆ ಸರ್ಕಾರಿ ರಸ್ತೆ ಎಂದರೆ ಸರಿ . ನಿಪಿ -48 ಚಾಕೇನಹಳ್ಳಿ ಗ್ರಾಮದ ಸರ್ವೆ ನಂ. 43 ಕ್ಕೆ ಸಂಬಂಧಿಸಿದ ಕ್ರಯ ಪತ್ರ ಎಂದರೆ ಸರಿ . ಸರ್ವೆ ನಂ. 43 ರ ಉತ್ತರಕ್ಕೆ ರಸ್ತೆ ಇದ್ದು ಸದರಿ ರಸ್ತೆಯ ಉತ್ತರಕ್ಕೆ ಪ್ರತಿವಾದಿಗಳಿಗೆ ಸೇರಿದ ದಾವಾ ಸ್ವತ್ತು ಇದೆ ಎಂದರೆ ಸರಿ . ನಿಪಿ -49 ರ ದಾಖಲೆಯನ್ನು ಯಾವ ಕಾರಣಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯು ನಿಪಿ-41 ರ ಕ್ರಯ ಪತ್ರದಲ್ಲಿ ಎರಡು ಮುಕ್ಕಾಲು ಗುಂಟೆ ಸ್ವತ್ತನ್ನು ಗೌಸ್‌ಪೀರ್ ರವರು ಮಂಜುನಾಥರವರಿಗೆ ಮಾರಾಟ ಮಾಡಿದ್ದಾರೆ ಎಂಬುದಾಗಿ ನಮೂದಿಸಲಾಗಿದೆ , ಆ ಕಾರಣ ನಿಪಿ -49 ನ್ನು ಹಾಜರುಪಡಿಸಿದ್ದೇನೆ ಎಂದು ತಿಳಿಸಿದ್ದಾರೆ . ಚಾಕೇನಹಳ್ಳಿ ಗ್ರಾಮದ ಸರ್ವೆ ನಂ. 43 ಕ್ಕೆ ಸಂಬಂಧಿಸಿ ನಾನು ದಾವೆ ಸಲ್ಲಿಸಿಲ್ಲ . ನಿಪಿ -50 ಕ್ರಯ ಪತ್ರ ಚೇಳೂರು ಗ್ರಾಮದ ಸ್ವತ್ತಿಗೆ ಸಂಬಂಧಿಸಿದ ಕ್ರಯ ಪತ್ರವೇ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ತಿಳಿಸಿದ್ದಾರೆ . ಸುರಿಗೇನಹಳ್ಳಿ ಗ್ರಾಮದ ಸರ್ವೆ ನಂ. 29 ರಲ್ಲಿ ಒಟ್ಟು 3 ಎಕರೆ 7 ಗುಂಟೆ ವಿಸ್ತೀರ್ಣದ ಸ್ವತ್ತು ಇದೆ ಎಂದರೆ ಸಾಕ್ಷಿಯು ನಮೂನೆ -15 ರ ಪ್ರಕಾರ 3 ಎಕರೆ 37 ಗುಂಟೆ ಇರುತ್ತದೆ ಎಂದು ತಿಳಿಸಿದ್ದಾರೆ . ರೆವಿನ್ಯೂ ಮತ್ತು ಸರ್ವೆ ದಾಖಲೆಗಳ ಪ್ರಕಾರ ಸದರಿ ಸರ್ವೆ ನಂಬರ್ ನಲ್ಲಿ ಕೇವಲ 3 ಎಕರೆ 7 ಗುಂಟೆ ಮಾತ್ರ ಇರುತ್ತದೆ ಎಂದರೆ ಅದರ ಬಗ್ಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ . ಸುರಿಗೇನಹಳ್ಳಿ ಗ್ರಾಮದ ಸರ್ವೆ ನಂ. 29 ರ ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಗೊತ್ತಿಲ್ಲ . ನಿಪಿ -50 ರಲ್ಲಿ ಸರ್ವೆ ನಂ. 29 ರ ಬಗ್ಗೆ ತಪ್ಪು ಉಲ್ಲೇಖಗಳನ್ನು ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ . ನಿಪಿ -51 ರಲ್ಲಿ ಸುರಿಗೇನಹಳ್ಳಿ ಗ್ರಾಮದ ಸ್ವತ್ತು ಎಂಬುದಾಗಿ ಉಪ ನೋಂದಣಾಧಿಕಾರಿಯ ಕಚೇರಿಯವರು ನನಗೆ ತಪ್ಪು ಮಾಹಿತಿ ನೀಡಿದ್ದಾರೆ ಎಂದರೆ ಸರಿಯಲ್ಲ . ನಿಪಿ-52 ಮತ್ತು 53

ದಾಖಲೆಗಳು ದಾವೆಗಾಗಿ ಸೃಷ್ಟಿಸಿರುವ ದಾಖಲೆಗಳು ಎಂದರೆ ಸರಿಯಲ್ಲ . ನಿಪಿ -54 ರಲ್ಲಿ ಸುರಿಗೇನಹಳ್ಳಿ ಕಾವಲ್ ಗ್ರಾಮದಲ್ಲಿ 3 ಎಕರೆ 37 ಗುಂಟೆ ವಿಸ್ತೀರ್ಣ ಎಂಬುದಾಗಿ ವಿವರ ಇರುತ್ತದೆ ಎಂದರೆ ಸರಿ . ನಿಪಿ -55 ರ ವಿವರಗಳ ಪ್ರಕಾರ ಪೂರ್ವ ಮತ್ತು ಉತ್ತರಕ್ಕೆ ಸುರಿಗೇನಹಳ್ಳಿ ಕಾವಲ್ ಗ್ರಾಮ ಬರುತ್ತದೆ ಎಂದರೆ ಸರಿ . ನಿಪಿ -56 ರ ಪ್ರಕಾರ 2 ಮತ್ತು 3 ನೇ ಪ್ರತಿವಾದಿಗಳಿಗೆ ಸಂಬಂಧಿಸಿ ನಾನು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ . ನಿಪಿ-59 ರಿಂದ 61 ಕ್ಕೂ ದಾವ ಸ್ವತ್ತಿಗೂ ಸಂಬಂಧವಿಲ್ಲ ಎಂದರೆ ಸರಿ . ನಿಪಿ -62 ರ ವಿರುದ್ಧ ಸರ್ವೆ ಮೇಲ್ಮನವಿ ಸಲ್ಲಿಸಿರುತ್ತೇನೆ . ನಿಪಿ -63 ರ ದಾಖಲೆಯನ್ನು ಈ ದಾವೆಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ . ಸುಮಾರು 50-60 ವರ್ಷಗಳ ಹಿಂದೆಯೇ ನನ್ನ ತಂದೆ ದಾವಾ ಸ್ವತ್ತಿನ ಮೇಲೆ ಹಕ್ಕು ಕಳೆದುಕೊಂಡಿದ್ದಾರೆ , ಆದರೂ ಸಹಾ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

Sd/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .